# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಓ ಎಸ್ ನಂ. 128-2011** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮೂರ್ತಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 07-01-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಟಿ.ಆರ್ ವಕೀಲರಿಂದಃ**

2. ನಮಗೆ ಪಿತ್ರಾರ್ಜಿತವಾಗಿ ಬಂದ ಕೆಲವು ಸ್ವತ್ತುಗಳಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೇನೆ ಹಾಗೂ ಇನ್ನೂ ಕೆಲವು ಪಿತ್ರಾರ್ಜಿತ ಸ್ವತ್ತುಗಳಲ್ಲಿ 2 ನೇ ವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನಾನು 2 ನೇ ವಾದಿಯ ವ್ಯವಸಾಯಕ್ಕೆ ಅಡ್ಡಿ ಪಡಿಸಿಸುವುದಿಲ್ಲ, ಹಾಗೇ ಅವರು ನನ್ನ ವ್ಯವಸಾಯಕ್ಕೆ ಅಡ್ಡಪಡಿಸುವುದಿಲ್ಲ ಎಂದಂರೆ ಸರಿ. ನಾನು ವ್ಯವಸಾಯ ಮಾಡುತ್ತಿರುವ ಜಮೀನುಗಳ ಸರ್ವೆ ನಂಬರ್ ಹಾಗೂ ಅವುಗಳ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ. ಹಾಗೇ 2 ನೇ ವಾದಿ ವ್ಯವಸಾಯ ಮಾಡುತ್ತಿರುವ ಜಮೀನುಗಳ ಸರ್ವೆ ನಂಬರ್ ಹಾಗೂ ಅವುಗಳ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಇಷ್ಟು ಅಷ್ಟು ಎಂದ ಹೇಳಲು ಬರುವುದಿಲ್ಲ ಎಲ್ಲಾ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನನಗೆ ದಾವಾ ಸ್ವತ್ತುಗಳ ಸರ್ವೇ ನಂಬರ್ ಗಳು, ಅವುಗಳ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನಾವು ಈ ದಾವೆಯಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ನಿಂಗಪ್ಪನಿಗೆ ಭಾಗದಲ್ಲಿ ಬಂದ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು ಸಾಗುವಳಿ ಮಾಡುತ್ತಿರುವ ಹಾಗೂ 2 ನೇ ವಾದಿ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವಿಬ್ಬರೂ ಒಟ್ಟಿಗ ಸಾಗುವಳಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಚೆಕ್ಕುಬಂದಿ ಕೂಡ ನನಗೆ ಹೇಳಲು ಬರುವುದಿಲ್ಲ.

3. ನನ್ನ ತಂದೆ ಶಿವಪ್ಪ, ನನ್ನ ಚಿಕ್ಕಪ್ಪ ನಿಂಗಪ್ಪ ಹಾಗೂ ಮರಪ್ಪ ಬಹಳ ಹಿಂದಿನಿದಲೂ ಬೇರೆ ಬೇರೆ ಯಾಗಿ ವಾಸ ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸುಮಾರು 35 ವರ್ಷದಿಂದ ಬರಿ ಮನೆ ಮಾತ್ರ ಬೇರೆ ಮಾಡಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ, ನನ್ನ ಚಿಕ್ಕಪ್ಪಂದಿರು ವಾಸವಾಗಿರುವ ಮನೆಗಳು ಪಿತ್ರಾರ್ಜಿತ ಸ್ವತ್ತುಗಳ ಎಂದರೆ ಸರಿ. ನಮ್ಮ ಹಾಗೂ ಪ್ರತಿವಾದಿಗಳ ನಡುವೆ ಈ ದಾವೆ ಹೂಡಿದ ಮೇಲೂ ಕೂಡ ಒಳ್ಳೆ ಅನುಬಂಧ ಇದೆ ಎಂದರೆ ಸರಿ.

ನನ್ನ ತಂದೆ, ನನ್ನ  ಚಿಕ್ಕಪ್ಪ ನಿಂಗಪ್ಪ ಅವರ ಭಾಗಕ್ಕೆ ಬಂದ ಜಮೀನುಗಳಲ್ಲಿ ಬೇರೆ ಬೇರೆಯಾಗಿ ಸಾಗುವಳಿ ಮಾಡುತ್ತಿದ್ದರು ಆದರೆ ಅವರರವರು ಹೆಸರಿಗೆ ಖಾತೆ ಮಾಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಮರಪ್ಪನವರ ಭಾಗಕ್ಕೆ ಬಂದ ಜಮೀನಿಗೆ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡು ಅದರಲ್ಲಿ ಸ್ವಲ್ಪ ಭಾಗ ಅಂದರೆ 24 ಗುಂಟೆ ಪ್ರತಿವಾದಿ-14 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾವು ಹಾಗೂ ಪ್ರತಿವಾದಿ-1 ರಿಂದ 13 ಮತ್ತು ಪ್ರತಿವಾದಿ-15 ರಿಂದ 17 ರವರು ಶರೀಕ್ ಆಗಿ ಹೇಗಾದರೂ ಮಾಡಿ ಪ್ರತಿವಾದಿ-14 ಗೆ ಮಾರಾಟ ಮಾಡಿರುವ ಜಮೀನನ್ನು ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ನಾನು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ-14 ಸದ್ಭಾವನೆಯ ಖರೀದಿದರನಾಗಿದ್ದು ಆತನಿಗೆ ತೊಂದರೆ ಕೊಡ ದೃಷ್ಟಿಯಿಂದ ನಾನು ಹಾಗೂ ಪ್ರತಿವಾದಿ-1 ರಿಂದ 13 ಮತ್ತು ಪ್ರತಿವಾದಿ-15 ರಿಂದ 17 ರವರು ಮಸಲತ್ತು ಮಾಡಿ ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ-1 ರಿಂದ 13 ಮತ್ತು ಪ್ರತಿವಾದಿ-15 ರಿಂದ 17 ನನ್ನ ಜೊತೆ ಶರೀಕ್ ಆಗಿರುವುದರಿಂದ ಅವರು ಈ ದಾವೆಯಲ್ಲಿ ಪ್ರತಿವಾದಿ ಪತ್ರ ಹಾಕಿಲ್ಲ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬಗಳ ಆಸ್ತಿಗಳು ಸುಮಾರು 30 ವರ್ಷದ ಹಿಂದೆಯೇ ವಿಭಾಗ ಆಗಿರುವುದರಿಂದ ನನ್ನ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಈಗ ಜಮೀನುಗಳ ಬೆಲೆ ಅಧಿಕಾವಾಗಿರುವುದರಿಂದ ಹೇಗಾದರೂ ಮಾಡಿ ಪ್ರತಿವಾದಿ-14 ರವರಿಂದ ಜಮೀನನ್ನು ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನಾವು ವಾಸವಾಗಿರುವ ಮನೆ ಹಾಗೂ ನಾನು ವ್ಯವಸಾಯ ಮಾಡುತ್ತಿರುವ ಜಮೀನಗಳು ಈ ದಾವೆಯಲ್ಲಿ ಸೇರಿಸಲು ನನಗೇನು ತೊಂದರೆ ಇಲ್ಲ.

<u>**ಪಾಟೀ ಸವಾಲು ಪ್ರತಿವಾದಿ-15 ಪರ ವಕೀಲರಾದ ಶ್ರಿ.ಆರ್.ಎನ್.ಎನ್ ರವರಿಂದಃ**</u>

ಪ್ರತಿವಾದಿ-14 ನಮ್ಮ ಗ್ರಾಮದವರೇ ಎಂದರೆ ಸರಿ, ಅವರಿಗೆ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳು ಗೊತ್ತಿತ್ತು ಎಂದರೆ ಸರಿ. ನಿಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ಪ್ರತಿವಾ-11 ಮತ್ತು 12 ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಅವರ ತಂದೆ ಇರುವಾಗಲೇ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಅವರ ಆ ರೀತಿ ಮಾರಾಟ ಮಾಡುವಾಗ ಆ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ  ತಂದೆ ಹಾಗೂ ನನ್ನ ಚಿಕ್ಕಪ್ಪಂದಿರ ನಡುವೆ ವಿಭಾಗ ಆಗಿರಲಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಸದಸ್ಯರೂಗಳಿಗೆ ದಾವಾ ಸ್ವತ್ತುಗಳಲ್ಲಿ ಸಮಭಾಗ ಇದೆ ಎಂದರೆ ಸರಿ. ಪ್ರತಿವಾದಿ-15 ರಿಂದ 17 ರವರಿಗೂ ಕೂಡ ದಾವಾ ಸ್ವತ್ತುಗಳಲ್ಲಿ ಭಾಗ ಇದೆ ಎಂದರೆ ಸಾಕ್ಷಿಯೂ ಅವರುಗಳು ಮೊದಲಿನಿಂದಲೂ ಬೇರೆ ಇದ್ದರು, ಅವರಿಗೂ ದಾವಾ ಸ್ವತ್ತಲ್ಲಿ ಭಾಗ ಇದೆ. ನಮ್ಮ ಕುಟುಂಬದವರು ಇನ್ನೂ ಸ್ವತ್ತುಗಳನ್ನು ಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ಪ್ರತಿವಾದಿ-14 ಗೆ ಜಮೀನನ್ನು ಮಾರಾಟ ಮಾಡಿರುವ ವಿಚಾರ ಪ್ರತಿವಾದಿ-15 ರಿಂದ 17 ಹಾಗೂ ನನ್ನ ಅಣ್ಣ ಗುರುಸ್ವಾಮಿಗೆ ಗೊತ್ತಿರಲಿಲ್ಲ ಎಂದರೆ ಸರಿ.

ಪ್ರತಿವಾದಿ–14 ಜಮೀನನ್ನು ಖರೀದಿಗೆ ಪಡೆದುಕೊಳ್ಳುವ ಮುಂಚೆ ನಮ್ಮನ್ನು ಕೇಳಿರಲಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**